# ಭಗವದ್ದಾಸ್ಯ ಎಂಬ ಭಕ್ತಿ

'ಭಕ್ತಿ' ಎಂಬ ಪದವನ್ನು ಕೇಳಿದಾಗಲೆಲ್ಲ ನೆನೆದಾಗಲೆಲ್ಲ 'ಮುಗ್ಧತೆ' ಎಂಬ ಇನ್ನೊಂದು ಪದ ನನ್ನೊಳಗೆ ಓಗೊಡುವುದು. ಮುಗ್ಧತೆ ಎಂದರೆ **Innocence.** ಮುಗ್ಧತೆ ಎಂದರೆ 'ಆಶ್ಚರ್ಯ'ವನ್ನು ಅನುಭವಿಸಲು ನಮ್ಮ ಅಂತಃಕರಣವು ತನಗೆ ತಿಳಿಯದೇ ಸಜ್ಜುಗೊಂಡ ಅವಸ್ಥೆ! ನಮ್ಮ ಬದುಕಿನಲ್ಲಿ ಒಂದು ಬದಿಯಲ್ಲಿ ಆಶ್ಚರ್ಯಕರ ಅನುಭವಗಳಿವೆ. ನಿಸರ್ಗವನ್ನು ನೋಡಿ. ಒಂದು ಸಣ್ಣ ಬೀಜದಲ್ಲಿ ಅಷ್ಟು ದೊಡ್ಡ ಮರ ಹೇಗೆ ಅಡಗಿತ್ತು! ಆ ಮರದಲ್ಲಿ ಸಾವಿರಾರು ಹಣ್ಣುಗಳು ತೂಗುತ್ತ ಒಂದೊಂದು ಹಣ್ಣಿನಲ್ಲಿಯೂ ಅನೇಕ ಬೀಜಗಳು ಹುದುಗಿ, ಮರವೊಂದು ದಶಕಗಳ ಕಾಲ; ಶತಕಗಳ ಕಾಲ ಬದುಕಿ ಅಸಂಖ್ಯ ಹಣ್ಣುಗಳನ್ನೂ ಅನಂತ ಬೀಜಗಳನ್ನೂ ನೀಡುತ್ತ ಒಂದು ಬೀಜದಲ್ಲಿ ಭವಿಷ್ಯದ ಬೀಜಗಳೆಲ್ಲವೂ ತಮ್ಮ ಜೀವಕೇಂದ್ರವನ್ನು ಕಂಡುಕೊಂಡಿರುವ ಅಚ್ಚರಿ ಎದುರಾಗುತ್ತದೆ. ಭವಿಷ್ಯದ ಬೀಜವೆಲ್ಲವೂ ಇಲ್ಲೇ ಇವೆ ಎಂದರೆ ಭವಿಷ್ಯ ಕಾಲವೆಲ್ಲವೂ ಸದ್ಯದ ಈ ವರ್ತಮಾನದಲ್ಲೇ ಇವೆ ಎಂದಂತೆ! ಅಂದರೆ ವರ್ತಮಾನದಲ್ಲಿ ಗತವೂ ಅಡಗಿದೆ. ಭವಿಷ್ಯವೂ ಅಡಗಿದೆ. ಬುದ್ಧ, 'ಕ್ಷಣ' ಎಂದಾಗ, ಅಲ್ಲಮ ಹಿಂದಣ ಅನಂತ; ಮುಂದಣ ಅನಂತ ಎಂದು ವಿರೋಧಾಭಾಸಾತ್ಮಕವಾಗಿ ನುಡಿದಾಗ ಈ ಅನುಭವವನ್ನೇ ಹೇಳುತ್ತಿರುವಂತಿದೆ. ಬೀಜ– ವೃಕ್ಷಗಳ ಮಾತು ಒಂದು ಉದಾಹರಣೆ ಮಾತ್ರ. ನಮ್ಮನ್ನು ಮುಸುಕಿರುವ ವ್ಯಾವಹಾರಿಕತೆಯನ್ನು ಸ್ವಲ್ಪ ಕಳಚಿಕೊಂಡು ಸುತ್ತನೋಡಿದರೆ ಇಲ್ಲಿ 'ಬೆರಗು' ತುಂಬಿಕೊಂಡಿದೆ.

ಭಗವದನುಭವವನ್ನು ಒಂದು 'ಬೆರಗು' ಎಂದು ಕೃಷ್ಣ ಗೀತೆಯಲ್ಲಿ ಬಣ್ಣಿಸಿದ್ದಾನೆ. ಅಂದರೆ ದೇವರ ಅವಸ್ಥೆ ತನ್ನನ್ನೇ ತಾನು ಒಂದು ಅಚ್ಚರಿ ಎಂಬಂತೆ ಅನುಭವಿಸುತ್ತಿರುವ ಅವಸ್ಥೆ! ಕೃಷ್ಣನ ಮಾತು ಹೀಗಿದೆ: 'ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಂ! ಆಶ್ಚರ್ಯವತ್ ವದತಿ ತಥೈವಚಾನ್ಯಃ!! ಆಶ್ಚರ್ಯವತ್ ಚ ಏನಂ ಅನ್ಯಃ ಶೃಣೋತಿ! ಶ್ರುತ್ವಾಪ್ಯೇನಂ ವೇದ ನಚೈವ ಕಶ್ಚಿತ್!! ಈ ಮಾತನ್ನು ಹೀಗೆ ಅನುಭವಿಸಬಹುದು: ಒಂದು ತತ್ವವಿದೆ. ಅದು ಇಲ್ಲೇ ಇದೆ. ಅದನ್ನು ಆತ್ಮವೆನ್ನಿ; ದೇವರೆನ್ನಿ; ಕ್ಷಣವೆನ್ನಿ; ಅನಂತವೆನ್ನಿ, ಮೀರಿದ್ದೆನ್ನಿ. ಗೀತೆಯ ಸಂದರ್ಭದಲ್ಲಿ ಅದನ್ನು 'ಆತ್ಮಾ' ಎಂದಿದ್ದಾರೆ. ಒಂದೊಮ್ಮೆ ಅದನ್ನು ಕಂಡವನು ದೊಡ್ಡದೊಂದು ಬೆರಗನ್ನು ಕಂಡವನಂತೆ ಸ್ತಬ್ಧನಾಗಿ ಬಿಡುವನು. 'ಆಶ್ಚರ್ಯವತ್ ಪಶ್ಯತಿ.' ಇನ್ನೊಬ್ಬನಿರುವನು, ತಾನು ಕಂಡುದನ್ನು ತನಗೇ ವಿವರಿಸಿಕೊಳ್ಳುವ ಪ್ರಯತ್ನದಲ್ಲಿ 'ಆಶ್ಚರ್ಯ' ಎಂದು ತನ್ನಲ್ಲೇ ಉಸುರುತ್ತ ಅಷ್ಟರಲ್ಲೇ ಎಲ್ಲವನ್ನೂ ಹೇಳಿದಂತೆ ಆಯಿತೆಂಬ ಪರ್ಯಾಪ್ತ ಭಾವವನ್ನು ಅನುಭವಿಸುವನು. 'ಆಶ್ಚರ್ಯವತ್ ವದತಿ.' ತನ್ನ ಕಿವಿಗಳನ್ನು ನೆಚ್ಚಿಕೊಂಡ ಮತ್ತೊಬ್ಬ ಬಹುಶ್ರುತನಿರುವನು– ಇವನು ಮೊದಲ ಬಾರಿಗೆ ಅರ್ಥಗಳ ಹಂಗೇ ಇಲ್ಲದ– ನಾವು ಹಚ್ಚಿದ ಅರ್ಥಗಳ ಹಂಗೇ ಇಲ್ಲದ– ಶಬ್ದವನ್ನು ಕೇಳಿ, 'ಶಬ್ದ'ದ ಸ್ವಾತಂತ್ರ್ಯವನ್ನು ಅನುಭವಿಸಿ, ಅರ್ಥ– ಅಪಾರ್ಥಗಳ ಹಂಗು ತನ್ನಲ್ಲಿಯೇ ಕಳಚಿಬಿದ್ದು, 'ಆಶ್ಚರ್ಯ' ಎನ್ನುವುದೇ ಪದಗಳ ಅರ್ಥಾತೀತ 'ಅರ್ಥ' ಎನ್ನುವುದನ್ನು ಅನುಭವಿಸಿ ಕಿವಿ ಕಂಪಿಸುತ್ತ ಕೂರುವನು. 'ಆಶ್ಚರ್ಯವತ್ ಶೃಣೋತಿ'. ಇಷ್ಟಾದರೂ, ಇದನ್ನು ತಿಳಿದೆ ಎನ್ನುವ ಮಾತು ಇವರಾರಿಂದಲೂ ಬಾರದು– 'ವೇದ ನಚೈವ ಕಶ್ಚಿತ್.'

ಕೃಷ್ಣನ ಈ ಮಾತುಗಳ ತಾತ್ಪರ್ಯವೇನೆಂದರೆ– ಈ ಲೋಕದಲ್ಲಿ ತಿಳುವಳಿಕೆಗೆ; ಜ್ಞಾನಕ್ಕೆ ನಾವು ಬಹಳ ಮಹತ್ವವನ್ನು ಕೊಟ್ಟಿರುವೆವು. ನಿಜವಾಗಿ ತಿಳಿವಳಿಕೆಗೆ ಮಹತ್ವವನ್ನು ಕೊಟ್ಟಿರುವೆವೋ ಅಥವಾ ತಾನು ತಿಳಿದವನೆಂದು ಆಗಬೇಕೆನ್ನುವುದಕ್ಕೆ ಮಹತ್ತ್ವವನ್ನು ಕೊಟ್ಟಿರುವೆವೋ ಆ ಮಾತು ಬೇರೆ. ತಿಳುವಳಿಕೆಯಾದರೋ ನಮಗೆ ಪಂಚೇಂದ್ರಿಯಗಳ ಮೂಲಕ ಉಂಟಾಗುವುದು. ನೋಡಿದೆವು, ಕೇಳಿದೆವು ಇತ್ಯಾದಿ. ಇದೇನೋ ನಿಜವೇ. ಇದು ಎಲ್ಲರ ಅನುಭವವೇ. ಈ ಅನುಭವದ ಇನ್ನೊಂದು ಮುಖ ಎಂದರೆ ಈ ಎಲ್ಲ ತಿಳುವಳಿಕೆಯೂ ಇಂದ್ರಿಯ ಬದ್ಧವಾಗಿದೆ. ಅಂದರೆ ನಮ್ಮ ಇಂದ್ರಿಯಗಳ ಮಿತಿ ನಮ್ಮ ತಿಳುವಳಿಕೆಯ ಮಿತಿಯೂ ಆಗಿದೆ. ಆದರೆ, ಇದು ನಮ್ಮ ಮಿತಿ ಎಂದು ಒಳಗಿನಿಂದ ನಮ್ಮ ಮನಸ್ಸೇ ಹೇಳುತ್ತಿದ್ದರೂ, ಸ್ವಾನುಭವಕ್ಕೆ ನಾವು ಬದ್ಧರಾಗಿರಬೇಕೆಂದು ಹೊಸ ಪ್ರಮೇಯವೊಂದನ್ನು ನಾವೇ ಸೃಷ್ಟಿಸಿಕೊಂಡು, ನಮ್ಮ ಶಕ್ತಿಯೇ ನಮ್ಮ ಮಿತಿ ಎಂದು ಅರ್ಥವಾದರೂ ನಮ್ಮ ಮಿತಿಯೇ ನಮ್ಮ ಶಕ್ತಿಯೂ ಹೌದಲ್ಲ ಎಂದುಕೊಳ್ಳುತ್ತ– ತಿಳಿದೋ ತಿಳಿಯದೆಯೋ ಸ್ವ ಅನುಭವ ಸಮರ್ಥನೆಯಲ್ಲಿ ನಾವು ಲೋಲುಪರಾಗಿರುವೆವು.

ಆದರೆ ಇದು ನಮ್ಮ 'ಮಿತಿ' ಎಂದು ಅರ್ಥವಾದರೆ– ನಿಜವಾಗಿ ಅರ್ಥವಾದರೆ– ಮಿತಿಯ ಅರಿವು ನಮ್ಮನ್ನು ಮಿತಿಯಿಂದ ಆಚೆಗೆ ದಾಟಿಸಬೇಕು; ದಾಟಿಸುತ್ತದೆ. ಮಿತಿಯ ಅರಿವು ಮಿತಿಯ ಸಮರ್ಥನೆಯಾಗಲಾರದು. ಮಿತಿಯ ಅರಿವು ಮಿತಿಯಲ್ಲೇ ಲೋಲುಪವಾಗುವ ಅವಸ್ಥೆಯಾಗಲಾರದು. 'ಅರಿವು'– ಮಿತಿಯನ್ನು ಮೀರುವ ಹಂಬಲವಾಗಿ ಮಾರ್ಪಡಬೇಕು; ಮಾರ್ಪಡುತ್ತದೆ! ಕೃಷ್ಣನೇನು ಸೂಚಿಸುತ್ತಿದ್ದಾನೆಂದರೆ– ಇಂದ್ರಿಯಗಳು ತಮಗೆ ತಿಳಿದಿದೆ ಎಂಬ ಅಹಂಕಾರದಿಂದ ಒಡಗೂಡಿದ ಸೀಮಿತ ತಿಳುವಳಿಕೆಯನ್ನು ಮಾತ್ರವಲ್ಲ, ಈ ಅಹಂಕಾರದಿಂದ ಬಿಡುಗಡೆಗೊಂಡ ಮೀರಿದ ತಿಳುವಳಿಕೆಯನ್ನೂ ನಮ್ಮ ಇಂದ್ರಯಗಳು ಅನುಭವಿಸಬಲ್ಲವು ಎಂದು. ಈ ಮೀರಿದ ತಿಳುವಳಿಕೆಯನ್ನು 'ಆಶ್ಚರ್ಯ' ಎಂದು ಸಹಜವಾಗಿ ಕರೆಯಲಾಗಿದೆ. 'ಆಶ್ಚರ್ಯ'ವನ್ನು ಅನುಭವಿಸಲಾಗುವಂತೆ ಇಂದ್ರಿಯಗಳು ಸಜ್ಜುಗೊಂಡಿವೆ. ಆದರೆ ಹಾಗೆ ಸಜ್ಜುಗೊಂಡಿರುವುದು ಅವುಗಳಿಗೇ ತಿಳಿದಿಲ್ಲ. ಇದೇ ವಿಚಿತ್ರ. ಇದೇ ವಿಶೇಷ. ಏಕೆಂದರೆ ಹಾಗೆ ಸಜ್ಜುಗೊಂಡಿರುವುದು ತಿಳಿದರೆ ಸಜ್ಜುಗೊಂಡಿರುವ ವ್ಯವಸ್ಥೆಯೇ ಊನಗೊಳ್ಳುತ್ತದೆ! 'ನಾನು ಜ್ಞಾನಿ' ಎನ್ನುವ ಮಾತೇ ಜ್ಞಾನವನ್ನು ಊನಗೊಳಿಸುವಂತೆ. ಆದರೆ ಸಜ್ಜುಗೊಂಡಿರುವುದು ಮಾತ್ರ ನಿಜ– ಎಂದ ಕೃಷ್ಣ.

ಒಂದು ಬದಿಯಲ್ಲಿ 'ಆಶ್ಚರ್ಯ'ವಿದೆ. ಇನ್ನೊಂದು ಬದಿಯಲ್ಲಿ ಆಶ್ಚರ್ಯವನ್ನು ಅನುಭವಿಸಲಾಗುವಂತೆ ತಮಗೆ ತಿಳಿಯದೇ ಸಜ್ಜುಗೊಂಡ ನಮ್ಮ ಇಂದ್ರಿಯಗಳಿವೆ. ಇಂದ್ರಿಯಗಳ ಈ ಅವಸ್ಥೆಯನ್ನು 'ಮುಗ್ಧತೆ' ಎಂದು ಕರೆಯಬಹುದು. ಇದೇ 'ಭಕ್ತಿ' ಎನ್ನುವ ಅಲೌಕಿಕತೇವವು ಉಗಮಿಸುವ ಜಾಗೆ ಅಥವಾ ಮುಗ್ಧತೆಯನ್ನೇ 'ಭಕ್ತಿ' ಎನ್ನಬಹುದು. ತನ್ನ ಮಿತಿಯ ಅರಿವನ್ನು ಮಿತಿಯನ್ನು ದಾಟುವ ಹಂಬಲವಾಗಿ ಮುಗ್ಧತೆಯು ಅನುಭವಿಸಬಲ್ಲುದು. ಮಿತಿಯ ಅರಿವಿನ ರೂಪದಲ್ಲಿ ಭಗವಂತನ ಕರುಣೆಯೇ ವೇಷಾಂತರದಲ್ಲಿದೆ ಎಂದು ಮುಗ್ಧತೆಗೆ ಹೊಳೆಯಬಲ್ಲುದು.

ಹೊಳೆದಂತೆ ಭಗವಂತನೇ ತನಗೆ ಕೈನೀಡಿ ಕರೆಯುತ್ತಿದ್ದಾನೆ ಎಂದು ಮುಗ್ಧವಾಗಿ ತಿಳಿಯಬಲ್ಲುದು. ಭಗವಂತನ ಕರುಣೆಯನ್ನೇ ಧ್ಯಾನಿಸುತ್ತ ತನಗೆ ತಿಳಿಯದೇ ತಾನು ಕರುಣೆಗೆ ಪಾತ್ರವಾಗಬಲ್ಲುದು. ಮಿತಿಯ ಅರಿವನ್ನೇ ಭಗವದ್ದಾಸ್ಯವಾಗಿ– ಸ್ವಾನುಭವದ ಸಮರ್ಥನೆಯಾಗಿ ಅಲ್ಲ– ಮಾರ್ಪಡಿಸಬಲ್ಲುದು. ಭಗವಂತನ ದಾಸನಾಗುವುದೆಂದರೆ ಲೋಕದ ದಾಸ್ಯದಿಂದ ಒಮ್ಮೆಗೇ ಬಿಡುಗಡೆ ಪಡೆದಂತೆ ಎಂದು ಈ ಲೋಕದಲ್ಲಿ ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬಲ್ಲುದು.

ಲೋಕದ ದಾಸ್ಯವೆಂದರೆ 'ನಿಜ'ಕ್ಕೆ ಪರ್ಯಾಯವಾಗಿ ಇಲ್ಲಿ ನಾವು ರೂಪಿಸಿಕೊಂಡಿರುವ ವ್ಯವಸ್ಥೆಗಳ ದಾಸ್ಯ. ಜಾತಿ, ಮತ, ವಿದ್ಯೆ, ದುಡ್ಡು, ಅಧಿಕಾರ ಈ ಎಲ್ಲ ನಾವೇ ಮಾಡಿಕೊಂಡ ವ್ಯವಸ್ಥೆಗಳನ್ನು ನಿಜವೆಂದು ನಂಬಿ, ಇತರರಿಗೂ ನಂಬಿಸಿ, ಇದಕ್ಕಾಗಿ ದೊಡ್ಡ ಯುದ್ಧಗಳನ್ನೇ ಮಾಡಬಲ್ಲ, ಎಂಥ ಹಿಂಸೆಗೂ ಹೇಸದಿರುವ, ನಮ್ಮ ಆಲೋಚನೆಗಳಿಗೆ ನಾವೇ ದಾಸರಾಗಿರುವ ಸಂದರ್ಭ. ಆಲೋಚನೆಗಳಿಗೂ ಅಂದರೆ ಮನಸ್ಸಿಗೂ– ಮೈಗೂ ನಿಕಟ ಸಂಬಂಧವಿರುವುದರಿಂದ ಇಂಥ ಹುಸಿಗಳಿಗೆ ದಾಸರಾಗಿ ನಮ್ಮ ಇಂದ್ರಿಯಗಳೇ ವಿಕೃತಗೊಂಡಿರುವ ಸಂದರ್ಭ. ದೇವರ ದಾಸನಿಗೆ ಈ ಲೋಕ ದಾಸ್ಯದಿಂದ ಅಭೂತಪೂರ್ವವಾಗಿ ಬಿಡುಗಡೆ ಸಂಭವಿಸಿರುತ್ತದೆ!

ದಾಸ್ಯದ ಈ ಮಹತ್ತ್ವವನ್ನು ಅನುಭವಿಸುವ ಅವಸ್ಥೆಯೇ 'ಭಕ್ತಿ'. ತನ್ನೊಳಗೇ ಕಂಡುಕೊಂಡ ಸ್ವಾತಂತ್ರ್ಯವನ್ನು ಭಗವದ್ದಾಸ್ಯ ಎಂದು ಕರೆದುಕೊಳ್ಳುವ ಮುಗ್ಧತೆಯೇ 'ಭಕ್ತಿ.'

■ ತೋಷ

## ಮಾತೇ ಮುತ್ತು

★ ನಿಮ್ಮ ಕನಸುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳಿ. ಕನಸುಗಳು ಸತ್ತುಹೋದಲ್ಲಿ ಬದುಕು ರೆಕ್ಕೆಮುರಿದ ಹಕ್ಕಿಯಂತಾಗುತ್ತದೆ. ಆಮೇಲೆ ಹಕ್ಕಿ ಹಾರಲಾಗುವುದಿಲ್ಲ.

ಲ್ಯಾಂಗ್ಸನ್ ಹ್ಯೂಸ್

★ ಜೀವನವೊಂದು ಹೂವು. ಪ್ರೀತಿ ಅದರ ಮಕರಂದ.

–ವಿಕ್ಟರ್ ಹ್ಯೂಗೊ

ಹೊರೆ ನಿಮ್ಮನ್ನು ನೆಲಕ್ಕೆ ಕುಸಿಯುವಂತೆ ಮಾಡುವುದಿಲ್ಲ. ಆದರೆ ಹೊರೆ ಹೊತ್ತಿರುವ ವಿಧಾನದಿಂದಾಗಿ ನೆಲಕ್ಕೆ ಕುಸಿಯುತ್ತೀರಿ.

ಲೋ ಹಾರ್ಝ್